# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 370 (434)

ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಆರ್.ಧರ್ಮಸೇನ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 23.09.2020

ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಇಲಾಖೆಯಿಂದ ನಿರ್ಮಿಸಿರುವ ಕೃಷಿ ಹೊಂಡಗಳೆಷ್ಟು; | ರಾಜ್ಯದಲ್ಲಿ 2014-15 ನೇ ಸಾಲಿನಿಂದ 2019-20 ನೇ ಸಾಲಿನವರೆಗೆ ಕೃಷಿ ಭಾಗ್ಯ ಯೋಜನೆಯಡಿ ಒಟ್ಟು 286911 ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ. |
| ಆ) | ಕೃಷಿ ಹೊಂಡಗಳಲ್ಲಿ ಪ್ರಾಣ ಹಾನಿ ತಪ್ಪಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; | ಕೃಷಿ ಹೊಂಡಗಳಲ್ಲಿ ಪ್ರಾಣ ಹಾನಿ ತಪ್ಪಿಸಲು ಕ್ಷೇತ್ರ ಮಟ್ಟದಲ್ಲಿ ರೈತರಿಗೆ ತಿಳುವಳಿಕೆ ನೀಡಿ ಕೃಷಿ ಹೊಂಡದ ಸುತ್ತಲೂ supporting stone with GI wire fencing ಹಾಗೂ ನೆರಳು ಪರದೆ ಘಟಕ ಅಳವಡಿಸಲು ಎಲ್ಲಾ ವರ್ಗದ ರೈತರಿಗೆ ಶೇ.50ರ ಸಹಾಯಧನ ನಿಗಧಿಪಡಿಸಲಾಗಿದೆ. ಸುರಕ್ಷಿತ ಕ್ರಮವಾಗಿ ಕೃಷಿ ಹೊಂಡದ ಹತ್ತಿರ ಸೂಚನಾ ಫಲಕವನ್ನು ಹಾಗೂ ಹೊಂಡಗಳಲ್ಲಿ ಹಗ್ಗದೊಂದಿಗೆ ಟೈರ್ ಟ್ಯೂಬ್ ನ್ನು ಇಳಿ ಬಿಡಲು ಸಹ ತಿಳಿಸಲಾಗಿದೆ. |
| ಇ) | ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ನಿಗದಿಪಡಿಸಿರುವ ಸಹಾಯಧನ ಎಷ್ಟು: ಈ ಸೌಲಭ್ಯವನ್ನು ಎಷ್ಟು ಜನ ರೈತರು ಸದುಪಯೋಗ ಪಡಿಸಿಕೊಂಡಿದ್ದಾರೆ; (ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ತಾಲ್ಲೂಕುವಾರು ಮಾಹಿತಿ ನೀಡುವುದು) | ಸುರಕ್ಷಿತ ಕ್ರಮವಾಗಿ ಕೃಷಿ ಹೊಂಡದ ಸುತ್ತಲೂ supporting stone with GI wire fencing ಹಾಗೂ ಕೃಷಿ ಹೊಂಡದ ಸುತ್ತಲೂ ನೆರಳು ಪರದೆ ಅಳವಡಿಸಲು ಎಲ್ಲಾ ವರ್ಗದ ರೈತರಿಗೆ ಶೇ.50ರ ಸಹಾಯಧನ ನಿಗದಿಪಡಿಸಲಾಗಿದೆ..ಈ ಸೌಲಭ್ಯವನ್ನು ಚಾಮರಾಜನಗರ ಜಿಲ್ಲೆ ಹಾಗೂ ಮೈಸೂರು ಜಿಲ್ಲೆಗಳ ಮಾಹಿತಿ ಅನುಬಂಧದಲ್ಲಿ ನೀಡಿದೆ. |
| ಈ) | ಕೃಷಿ ಭಾಗ್ಯ ಯೋಜನೆಯ ಮಾರ್ಗಸೂಚಿಗಳ ಬಗ್ಗೆ ವಿವರಗಳನ್ನು ನೀಡುವುದು? | 2014-15 ನೇ ಸಾಲಿನಿಂದ ಕೃಷಿ ಭಾಗ್ಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯು ಮಳೆಯಾಶ್ರಿತ ರೈತರಿಗೆ ಉಪಯುಕ್ತವಾಗಿರುತ್ತದೆ. ಬಿದ್ದ ಮಳೆ ನೀರನ್ನು |

| | | |
|---|---|---|
| | | ವ್ಯರ್ಥ ಮಾಡದೆ ಆಯ್ದ ಸ್ಥಳದಲ್ಲಿ ಕೃಷಿ ಹೊಂಡ ತೆಗೆದು ಜಲ ಸಂಗ್ರಹಿಸಿ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು ಯೋಜನೆಯ ಉದ್ದೇಶವಾಗಿರುತ್ತದೆ.ರೈತರ ಒಟ್ಟು ಸಾಗುವಳಿ ಕ್ಷೇತ್ರ ಕನಿಷ್ಟ 1.0 ಎಕರೆ ಹೊಂದಿರಬೇಕು.<br>ಈ ಯೋಜನೆಯಡಿ ನೀಡಲಾಗುತ್ತಿರುವ ಸೌಲಭ್ಯಗಳು ಹಾಗೂ ಸಹಾಯಧನದ ವಿವರ:-<br>1. ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ): ಸಾಮಾನ್ಯ ವರ್ಗದ ರೈತರಿಗೆ ಶೇ.80 ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ.90ರ ಸಹಾಯಧನ ನೀಡಲಾಗುವುದು.<br>2. ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ/ ಪರ್ಯಾಯ ಮಾದರಿಗಳು( ಗರಿಷ್ಟ – ರೂ 50000) ಸಾಮಾನ್ಯ ವರ್ಗದ ರೈತರಿಗೆ ಶೇ.80 ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ.90ರ ಸಹಾಯಧನ ನೀಡಲಾಗುವುದು<br>3. ಹೊಂಡದಿಂದ ನೀರು ಎತ್ತಲು ಡಿಸೇಲ್ ಪಂಪ್ ಸೆಟ್(3 to 5 ಎಚ್.ಪಿ) ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ.90ರ ಸಹಾಯಧನ ನೀಡಲಾಗುವುದು.<br>4. ನೀರನ್ನು ಬೆಳೆಗೆ ಹಾಯಿಸಲು ಲಘು ನೀರಾವರಿ (ಹನಿ/ತುಂತುರು) ಸಾಮಾನ್ಯ ವರ್ಗದ ರೈತರಿಗೆ ಶೇ.90 ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ.90ರ ಸಹಾಯಧನ ನೀಡಲಾಗುವುದು.<br>5. ಕೃಷಿ ಹೊಂಡದ ಸುತ್ತಲೂ ನೆರಳು ಪರದೆ (Shade net) ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ.50ರ ಸಹಾಯಧನ ನೀಡಲಾಗುವುದು. |

ಸಂಖ್ಯೆ: AGRI-AML-161/2020

(ಬಿ.ಸಿ.ಪಾಟೀಲ್)
ಕೃಷಿ ಸಚಿವರು

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 434 ರ ಅನುಬಂಧ

ಚಾಮರಾಜನಗರ ಜಿಲ್ಲೆ ಹಾಗೂ ಮೈಸೂರು ಜಿಲ್ಲೆಗಳ ತಾಲ್ಲೂಕುವಾರು ಮಾಹಿತಿ

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ಫಲಾನುಭವಿ ರೈತರ ಸಂಖ್ಯೆ |
|---|---|---|---|
| 1 | ಚಾಮರಾಜನಗರ | ಚಾಮರಾಜನಗರ | 8 |
| 2 | | ಗುಂಡ್ಲುಪೇಟೆ | 2 |
| 3 | | ಕೊಳ್ಳೇಗಾಲ | 1 |
| 4 | | ಹನೂರು | 7 |
| 5 | | ಯಳಂದೂರು | 0 |
| | | **ಜಿಲ್ಲಾ ಒಟ್ಟು** | **18** |
| 6 | ಮೈಸೂರು | ಮೈಸೂರು | 0 |
| 7 | | ಹೆಚ್.ಡಿ.ಕೋಟೆ | 3 |
| 8 | | ಹುಣಸೂರು | 0 |
| 9 | | ಕೆ.ಆರ್.ನಗರ | 0 |
| 10 | | ನಂಜನಗೂಡು | 0 |
| 11 | | ಪಿರಿಯಾಪಟ್ಟಣ | 0 |
| 12 | | ಟಿ.ನರಸೀಪುರ | 0 |
| | | **ಜಿಲ್ಲಾ ಒಟ್ಟು** | **03** |